ಸಂ:ಗ್ರಾಅಪ 161 ಗ್ರಾನೀಸ(4)11

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:24.12.2011

1593
3/1/12

## ಸುತ್ತೋಲೆ

ವಿಷಯ: ಗ್ರಾಮೀಣ ಕುಡಿಯುವ ನೀರು ಯೋಜನೆಗಳ ವಿದ್ಯುದ್ಧೀಕರಣ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂ:ಗ್ರಾಅಪ 23 ಗ್ರಾನೀಸ(4)03 ದಿನಾಂಕ:07.04.2011.

2. ಮುಖ್ಯ ಇಂಜಿನಿಯರ್, PRED ರವರ ಪತ್ರ ಸಂ:ಮುಇಂ/ಪಂ.ರಾ.ಇಂ.ಇ/ತ್ವಗ್ರಾನೀಸ-3/ತಾಂಸ-3/ವಿದ್ಯುತ್/ಬೆಂ/2011-12/6959 ದಿನಾಂಕ:10.11.2011.

-

ಗ್ರಾಮೀಣ ಕುಡಿಯುವ ನೀರು ಯೋಜನೆಗಳ ವಿದ್ಯುದ್ಧೀಕರಣ ಸಂಬಂಧ ಉಲ್ಲೇಖಿತ ಆದೇಶದಲ್ಲಿ ಸಂಬಂಧಪಟ್ಟ KPTCL/ESCOM ಗಳೊಂದಿಗೆ ಅನುಸರಿಸಬೇಕಾದ ಮುಂದಿನ ಪರಿಕ್ರಮಗಳ ಬಗ್ಗೆ ಆದೇಶಿಸಲಾಗಿದೆ. ವಿದ್ಯುದ್ಧೀಕರಣ ಠೇವಣಿ ಮತ್ತು ಮೇಲುಸ್ತುವಾರಿ ಶುಲ್ಕ ಪಾವತಿಸಿದ್ದರೂ ಸಹ KPTCL/ESCOMಗಳು ನಿರೀಕ್ಷಿತ ಮಟ್ಟದಲ್ಲಿ ಸ್ಪಂದಿಸದೇ, ಸಾವಿರಾರು ಕುಡಿಯುವ ನೀರು ಯೋಜನೆಗಳ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದರೂ ಸಹ ಯೋಜನೆಗಳು ವಿದ್ಯುದ್ಧೀಕರಣವಾಗದೇ ಗ್ರಾಮೀಣ ಜನತೆಗೆ ಅಗತ್ಯವಿರುವ ಕುಡಿಯುವ ನೀರು ಪೂರೈಕೆ ಮಾಡುವಲ್ಲಿ ಸಮಸ್ಯೆಗಳು ಉದ್ಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದರಿಂದ ಉದ್ದೇಶಿತ ಯೋಜನೆಗಳ ಮೇಲಿನ ಬಂಡವಾಳ ಹೂಡಿಕೆ ಹಾಗೂ ತದನಂತರದ ವಿವಿಧ ಹಂತಗಳ ಶ್ರಮ ನಿಷ್ಫಲವಾಗುತ್ತಿದೆ. ಇಂತಹ ಶೋಚನೀಯ ಪರಿಸ್ಥಿತಿಯನ್ನು CE/PRED ರವರು ಉಲ್ಲೇಖ (2)ರ ಪ್ರಸ್ತಾವನೆಯಲ್ಲಿ ವಿವರಿಸಿ, ಇಲಾಖಾ ಮುಖೇನವೇ ವಿದ್ಯುದ್ಧೀಕರಣ ಮಾಡುವ ಕುರಿತು ಸರ್ಕಾರದ ಆದೇಶ ಕೋರಿದ್ದಾರೆ.

ಮೇಲ್ಕಂಡ ಸನ್ನಿವೇಶದಲ್ಲಿ, ತಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೂ ಸರ್ಕಾರದಿಂದ ಅನುಮೋದನೆಯಾಗಿರುವ ಗ್ರಾಮೀಣ ನೀರು ಪೂರೈಕೆ ಯೋಜನೆಗಳ ವಿದ್ಯುದ್ಧೀಕರಣಕ್ಕೆ ಸಂಬಂಧಿಸಿದಂತೆ ಕೆಳಕಂಡ ಪರಿಕ್ರಮಗಳನ್ನು ಅನುಸರಿಸಲು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳು / PREDಗಳು ಮುಂದಿನ ಕ್ರಮವಹಿಸತಕ್ಕದ್ದೆಂದು ತಿಳಿಸಿದೆ.

06 JAN 2012
6154/1593

- ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಸಿವಿಲ್ ಕಾಮಗಾರಿಗಳ ಜೊತೆಗೆ ವಿದ್ಯುದ್ಧೀಕರಣದ ಅಂದಾಜು ವೆಚ್ಚವನ್ನು ಪ್ರತ್ಯೇಕವಾಗಿ ಅಳವಡಿಸಿ ಟೆಂಡರ್ ಪ್ರಕಟಣೆಯನ್ನು ಹೊರಡಿಸುವುದು.
- KPTCL/ESCOMಗಳ ಮುಖೇನ ಅಗತ್ಯವಿರುವ ಅಂದಾಜು ಪಟ್ಟಿಯನ್ನು ತಾಂತ್ರಿಕವಾಗಿ ಸಿದ್ಧಪಡಿಸಿ / ಪರಿಶೀಲನೆಗೊಳಪಡಿಸಿ ಅಗತ್ಯ ಮೇಲುಸ್ತುವಾರಿ / ಮೇಲ್ವಿಚಾರಣಾ ಶುಲ್ಕ (Supervisory Charges)ವನ್ನು ನಿಯಮಾನುಸಾರ ಸಂಬಂಧಪಟ್ಟ KPTCL/ESCOMಗಳಿಗೆ ಪಾವತಿಸಿದ ದಿನಾಂಕದಿಂದ 15 ದಿನಗಳೊಳಗಾಗಿ KPTCL/ESCOMಗಳಿಂದ ಅಗತ್ಯ ಅನುಮೋದನೆ ಪಡೆದುಕೊಳ್ಳತಕ್ಕದ್ದು.
- PRED ಇಲಾಖೆ ಮುಖೇನವೇ ಈಗಾಗಲೇ ಸಕ್ಷಮ ಪ್ರಾಧಿಕಾರದಲ್ಲಿ ನೊಂದಾಯಿಸಿಕೊಂಡಿರುವ ಅಧಿಕೃತ ವಿದ್ಯುತ್ ಗುತ್ತಿಗೆದಾರರ ಮುಖೇನ ಯೋಜನೆಗಳ ವಿದ್ಯುದ್ಧೀಕರಣ ಬಾಬ್ತಿನ ಕಾಮಗಾರಿಗಳನ್ನು ಸಮರ್ಪಕವಾಗಿ ಇಂಧನ ಇಲಾಖೆಯ / ESCOMಗಳ ಮಾರ್ಗಸೂಚಿಗಳನ್ವಯ ನಿರ್ವಹಿಸತಕ್ಕದ್ದು / ಅನುಷ್ಠಾನಗೊಳಿಸತಕ್ಕದ್ದು.

Corporate Office, HESCOM.
Navanagar, HUBLI

| | |
|---|---|
| F. A. | |
| SEET & P | |
| SEE (P) | |
| G. M. | |
| P. S. | |
| | D.T. |

* ಸಕ್ಷಮ ಪ್ರಾಧಿಕಾರದಲ್ಲಿ ನೊಂದಾಯಿಸಿಕೊಂಡಿರುವ ಅಧೀಕೃತ ವಿದ್ಯುತ್ ಗುತ್ತಿಗೆದಾರರ ಮುಖೇನವೇ KPTCL/ESCOMಗಳಿಗೆ ಮೇಲುಸ್ತುವಾರಿ ಶುಲ್ಕ ಪಾವತಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯೇ ವಿದ್ಯುದ್ಧೀಕರಣ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಸಂದರ್ಭಗಳಲ್ಲಿ, ಸರ್ಕಾರವು ಉಲ್ಲೇಖ (1)ರಲ್ಲಿ ಆದೇಶಿಸಿರುವಂತೆ ವಿದ್ಯುದ್ಧೀಕರಣ ಬಾಬ್ತಿನ ಠೇವಣಿಯನ್ನು ಸಂಬಂಧಪಟ್ಟ KPTCL/ESCOMಗಳಿಗೆ ಪಾವತಿಸತಕ್ಕದ್ದಲ್ಲ.
* ಈಗಾಗಲೇ KPTCL/ESCOMಗಳಿಗೆ ವಿದ್ಯುದ್ಧೀಕರಣ ಠೇವಣಿ ಶುಲ್ಕ ಪಾವತಿ ಮಾಡಿರುವ ಪ್ರಕರಣಗಳಲ್ಲಿ ಸಂಬಂಧಪಟ್ಟ ESCOMಗಳೊಂದಿಗೆ ಕೂಡಲೇ ಸಮಾಲೋಚಿಸಿ ಜಾಗ್ರತೆಯಾಗಿ ಯೋಜನೆಗಳನ್ನು ವಿದ್ಯುದ್ಧೀಕರಣಗೊಳಿಸತಕ್ಕದ್ದು.

(ರಾಮಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ (ಗಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಸಂಕೀರ್ಣ, ನಂ.55, 4ನೇ ಮಹಡಿ, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20.
3. ರಾಜ್ಯದ ಎಲ್ಲಾ (8) ಅಧೀಕ್ಷಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವೃತ್ತ ಕಛೇರಿಗಳು.
4. ರಾಜ್ಯದ ಎಲ್ಲಾ (38) ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
5. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು. ಆಪ್ತ ಸಹಾಯಕರುಗಳು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, KPTCL, ಕಾವೇರಿಭವನ, ಬೆಂಗಳೂರು-9.
5. ವ್ಯವಸ್ಥಾಪಕ ನಿರ್ದೇಶಕರುಗಳು, ಬೆಸ್ಕಾಂ, ಬೆಂಗಳೂರು / ಜೆಸ್ಕಾಂ, ಗುಲ್ಬರ್ಗಾ / ಮೆಸ್ಕಾಂ, ಮಂಗಳೂರು / ಹೆಸ್ಕಾಂ, ಹುಬ್ಬಳ್ಳಿ, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
6. ಸರ್ಕಾರದ ಅಧೀನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ, ಆರ್ಥಿಕ ಸಂಗ್ರಹಣಾಕೋಶ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳು ಗ್ರಾಅಪಂ.ರಾಜ್ ಇಲಾಖೆ ಮತ್ತು ಎಲ್ಲಾ ನಿರ್ದೇಶಕರುಗಳು, ಆಂತರಿಕ ಆರ್ಥಿಕ ಸಲಹೆಗಾರರು ಇವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರುಗಳು.
8. ನಿರ್ದೇಶಕರು, SWSM ಕಾವೇರಿ ಭವನ, ಬೆಂಗಳೂರು-9.
9. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು-01.

ನಂ:ಮೆಮೋ/ಹೆಸ್ಕಾಂ/ಪ್ರವ್ಯ/ಇಇ-ಪಿ1/ಎಇಇ-1/2011-12/ 2452144 ದಿನಾಂಕ: 13 JAN 2012

13.1.12
ಪ್ರಧಾನ ವ್ಯವಸ್ಥಾಪಕರು,
(ತಾ. ಆ ಮತ್ತು ಮಾಸಅ), ಹೆಸ್ಕಾಂ, ಹುಬ್ಬಳ್ಳಿ.

ಪ್ರತಿಗಳನ್ನು:

1) ಮುಖ್ಯ ಇಂಜಿನೀಯರ್ (ವಿ), ಹೆಸ್ಕಾಂ, ಹುಬ್ಬಳ್ಳಿ / ಬೆಳಗಾಂವ ವಲಯ ಇವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
2) ಅಧೀಕ್ಷಕ ಇಂಜಿನೀಯರ್ (ವಿ), ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ/ಶಿರಶಿ/ಹಾವೇರಿ/ಬೆಳಗಾಂವ/ಚಿಕ್ಕೋಡಿ/ಬಿಜಾಪುರ/ಬಾಗಲಕೋಟ ಇವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
3) ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ಕಾ ಮತ್ತು ಪಾ ವಿಭಾಗ, ಹೆಸ್ಕಾಂ, ಧಾರವಾಡ (ಗ್ರಾಮೀಣ)/ಧಾರವಾಡ(ಶಹರ)/ಹುಬ್ಬಳ್ಳಿ(ಗ್ರಾಮೀಣ)/ಹುಬ್ಬಳ್ಳಿ(ಶಹರ)/ಗದಗ/ಹಾವೇರಿ/ರಾಣೇಬೆನ್ನೂರ/ಶಿರಶಿ/ಕಾರವಾರ/ಬೆಳಗಾಂವ/ಬೈಲಹೊಂಗಲ/ಘಟಪ್ರಭಾ/ಚಿಕ್ಕೋಡಿ/ಅಥಣಿ/ರಾಯಬಾಗ/ಬಿಜಾಪುರ/ಇಂಡಿ/ಬಾಗಲಕೋಟ/ಜಮಖಂಡಿ/ಮುಧೋಳ ಇವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
4) ನಿಯಂತ್ರಣಾಧಿಕಾರಿ (ಆಂ/ಪ), ನಿಗಮ ಕಚೇರಿ, ಹೆಸ್ಕಾಂ, ಹುಬ್ಬಳ್ಳಿ ಇವರ ಮಾಹಿತಿಗಾಗಿ.